**OS: 72/2018**
**P.W-1**

## <u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>

ದಿನಾಂಕಃ 05.06.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

### <u>ಪಾಟೀ ಸವಾಲು ಪ್ರತಿವಾದಿ ನಂಃ 3 ಮತ್ತು 7 ರವರ ಪರ ವಕೀಲರಿಂದ</u>

ಈ ದಾವೆಗೆ ಸಂಬಂಧಿಸಿದ ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಮನೆ ಮತ್ತು ಹೊಲಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿ ನಂಃ 8 ಟಿ.ಜಿ ಮಲ್ಲಿಕಾರ್ಜುನ ಗೌಡರು ನಮ್ಮ ವಂಶಸ್ಥರು ಅಲ್ಲ ಎಂದರೆ ಸರಿ. ದಾವಾ ಆಸ್ತಿಗಳು ಮೂಲತಃ ನನ್ನ ಅಜ್ಜ ಮತ್ತು ಅಜ್ಜಿಯಿಂದ ಬಂದಿರುವಂತಹ ಆಸ್ತಿಗಳು ಆಗಿರುತ್ತವೆ. ಈ ಸಂಬಂಧವಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಪ್ರತಿವಾದಿ ನಂಃ 1 ರವರು ನನ್ನ ಅಣ್ಣ. ದಾವಾ ಪತ್ರದಲ್ಲಿ 3 ನೇ ಪ್ರತಿವಾದಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಇರುವುದಿಲ್ಲ ಎಂದು ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿ. 3 ನೇ ಪ್ರತಿವಾದಿಗೆ ದಾವಾ ಅನುಸೂಚಿ 3, 4 ಮತ್ತು 6 ಆಸ್ತಿಗಳನ್ನು ಮಾರಾಟ ಮಾಡಲು ಹಕ್ಕು ಇತ್ತು ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ ನನ್ನ ಅಣ್ಣ. ದಾವಾ ಆಸ್ತಿಗಳಲ್ಲಿ ಯಾವ-ಯಾವ ಆಸ್ತಿಗಳು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂಬುದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗಳ ಖಾತೆಯು 3 ನೇ ಪ್ರತಿವಾದಿಗೆ ಹೇಗೆ ಬಂತು ಎಂಬುದು ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯ ಖಾತೆಯು ಈಗ 1 ನೇ ಪ್ರತಿವಾದಿ, 3 ನೇ ಪ್ರತಿವಾದಿ, 6 ನೇ ಪ್ರತಿವಾದಿಗಳ ಹೆಸರಿನಲ್ಲಿ ಇದೆ. ನನ್ನ ತಂದೆ ಹಿಂದಿನಿಂದಲೂ ಸಾಗುವಳಿ ಮಾಡುತ್ತಿದ್ದು, ಅದರ ಆಧಾರದ ಮೇಲೆ ನನ್ನ ತಂದೆಯ ಹೆಸರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ ಹಾಗಾಗಿ ಅವರು ಈ ಮೇಲೆ ಹೇಳಿದವರ ಹೆಸರಿಗೆ ವಿಭಾಗದ ಮೂಲಕ ಬರೆದುಕೊಟ್ಟಿರುತ್ತಾರೆ. ಸದರಿಯವರು ತಮ್ಮ ಹೆಸರಿನಲ್ಲಿರುವ ಆಸ್ತಿಗಳ ಮೇಲೆ ಈಗಾಗಲೆ ಬ್ಯಾಂಕ್ ನಿಂದ ಸಾಲ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ.

ನಾನು ಮತ್ತು ಪ್ರತಿವಾದಿ ನಂಃ 1, 3 ಮತ್ತು 6 ರವರು ಒಟ್ಟಿಗೆ ಜೀವನ ಮಾಡುತ್ತಿಲ್ಲ ಬೇರೆ-ಬೇರೆ ಆಗಿರುತ್ತೇವೆ. ಪ್ರತಿವಾದಿ ನಂಃ 1, 3 ಮತ್ತು 6 ರವರು ಯಾವ-ಯಾವ ಮನೆಗಳಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವುಗಳ ಡೋರ್ ನಂಬರ್ ಸಹ ನನಗೆ ಗೊತ್ತಿಲ್ಲ. ಕಳೆದ 30 ವರ್ಷಗಳಿಂದ ನಾವು ಬೇರೆ-ಬೇರೆ ಮನೆಗಳಲ್ಲಿ ವಾಸವಾಗಿರುತ್ತೇವೆ. ಪ್ರತಿವಾದಿ ನಂಃ 8 ರವರಿಗೆ ಯಾವ ಆಸ್ತಿಯನ್ನು ಪ್ರತಿವಾದಿ ನಂಃ 3 ರವರು ಮಾರಾಟ ಮಾಡಿದ್ದಾರೆಂದು ನನಗೆ

ಗೊತ್ತಿಲ್ಲ. ಈ ಸಂಬಂಧವಾಗಿ ದಾವಾ ಅನುಸೂಚಿ 3, 4 ಮತ್ತು 6 ರ ಖಾತೆ ಮಾಡುವಾಗ ನಾನು ತಕರಾರು ಅರ್ಜಿಯನ್ನು ಕೊಟ್ಟಿರುವುದಿಲ್ಲ. ಈ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲುವಿಭಾಗ ಮಾಡಿಕೊಂಡಿರುವುದಿಲ್ಲ.

ದಾವಾ ಅನುಸೂಚಿ-ಬಿ ರ 5 ರ ಆಸ್ತಿ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಗೆ ಸಂಬಂಧಿಸಿದಂತ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸರ್ವೆ ನಂಃ 138, 128A/1, 132, 128A;/1, 128B/A, 128A/ಊ ಆಸ್ತಿಗಳು ನನ್ನ ಕುಟುಂಬಕ್ಕೆ ಸೇರಿಸಿದ ಆಸ್ತಿಗಳು ಆಗಿರುತ್ತವೆ ಅವುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಮನೆ ಡೋರ್ ನಂಃ 58, 127, 72, 110, 73, 109, 74, 109, 137, 214, 138, 315, 138, 216, 140, 141, 144, 233 ರ ಆಸ್ತಿಗಳು ನಮ್ಮ ಕುಟುಂಬಕ್ಕೆ ಸಂಬಂಧಪಟ್ಟವುಗಳು ಆಗಿರುತ್ತವೆ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರ ಸರಿಯಲ್ಲ. ಸದರಿ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಮತ್ತು ಯಾರು ವಾಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ.

ದೊಡ್ಡ ಓಬಯ್ಯ ನನ್ನ ತಂದೆ ಇರುತ್ತಾರೆ. ಅವರಿಗೆ ಒಟ್ಟು 5 ಜನ ಮಕ್ಕಳು ಇರುತ್ತೇವೆ. ಅವರಿಗೆ ಹನುಮಕ್ಕ ಎಷ್ಟನೇ ಮಗಳು ಎಂದು ನನಗೆ ಗೊತ್ತಿಲ್ಲ. ಸದರಿ ಹನುಮಕ್ಕಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳೆಂದರೆ ಮಹಾಂತೇಶ, ನಾಗೇಶ, ಸಣ್ಣ ಹನುಮಂತಮ್ಮ, ದೊಡ್ಡ ಹನುಮಂತಮ್ಮ ಎಂದು ಇರುತ್ತದೆ. ಅವರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಮಹಾಂತೇಶರವರನ್ನು ಮಾತ್ರ ಸೇರ್ಪಡೆ ಮಾಡಿರುತ್ತೇನೆ. ಈ ದಾವೆಯಲ್ಲಿ ಸೇರ್ಪಡೆ ಮಾಡದೆ ಇರುವ ಆಸ್ತಿಗಳಲ್ಲಿ ನನಗೆ ಮತ್ತು ಎಲ್ಲಾರಿಗೆ ಭಾಗಾಂಶದ ಹಕ್ಕು ಇದೆ.

(ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**